ರಾಜ್ಯದಲ್ಲಿ ಐ.ಪಿ.ಪಿ. ಯೋಜನೆಯ ಅನುಷ್ಠಾನದ ಬಗ್ಗೆ

೧೧೯೩. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಐಪಿಪಿ ಯೋಜನೆಯಡಿಯಲ್ಲಿ ರಾಜ್ಯದ ಎಷ್ಟು ಜಿಲ್ಲೆಗಳನ್ನು ಆಳವಡಿಸಲಾಗಿದೆ.

ಆ) ಐಪಿಪಿ ಯೋಜನೆಗೆ ಬೇಕಾಗಿರುವ ಕಟ್ಟಡ ವಾಹನಗಳು ಹಾಗೂ ಇನ್ನುಳಿದ ಸಾಮಗ್ರಿಗಳನ್ನು ಪೂರೈಸಲು ವಿಳಂಬ ಆಗುತ್ತಿರುವುದಕ್ಕೆ ಕಾರಣವೇನು ?

ಇ) ಸಿಬ್ಬಂದಿ ವರ್ಗದವರನ್ನು ನೇಮಕಾತಿ ಮಾಡುವಲ್ಲಿ ವಿಳಂಬವಾಗುತ್ತಿರಲು ಕಾರಣವೇನು ?

ಈ) ಈ ಯೋಜನೆಗಾಗಿ ಒದಗಿಸಿದ ಹಣಕಾಸಿನ ನೆರವೆಷ್ಟು ಲಭ್ಯವಾಗಿದೆ ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ಐಪಿಪಿ ಯೋಜನೆಯನ್ನು ೬ ಜಿಲ್ಲೆಗಳಲ್ಲಿ ತೆಗೆದುಕೊಳ್ಳಲಾಗಿದೆ. ಅವುಗಳೆಂದರೆ, ಬೆಳಗಾಂ, ಬಿಜಾಪುರ, ಬೀದರ್, ರಾಯಚೂರು, ಧಾರವಾಡ ಮತ್ತು ಗುಲ್ಬರ್ಗಾ.

ಆ) ಎಲ್ಲಾ ವಾಹನಗಳನ್ನು ೧೯೮೪-೮೫ರಲ್ಲಿ ಒದಗಿಸಲಾಗಿದೆ. ಪ್ರಾರಂಭದಲ್ಲಿ ಕಟ್ಟಡಗಳನ್ನು ಕಟ್ಟುವಾಗ ವಿಳಂಬವಾಯಿತು. ಕಾರಣವೇನೆಂದರೆ ಎಲ್ಲಾ ಖಾಲಿ ಹುದ್ದೆಗಳನ್ನು ತುಂಬದೇ ಇರುವುದು, ಸಿಮೆಂಟ್ ದೊರೆಯದಿರುವುದು, ಹಾಗೂ ಸತತ ಮೂರು ವರ್ಷದಿಂದ ಬರಗಾಲ ಪರಿಸ್ಥಿತಿಯಿಂದ ನೀರಿನ ಅಭಾವ ಮತ್ತು ಸಣ್ಣ ಕೆಲಸಗಳು ಒಳಪ್ರದೇಶದಲ್ಲಿರುವುದರಿಂದ ವಿಳಂಬವಾಗಿದೆ, ಸಾಧನ ಸಾಮಗ್ರಿಗಳನ್ನು ಮತ್ತು ಪೀಠೋಪಕರಣಗಳನ್ನು ಕಟ್ಟಡಗಳು ನಿರ್ಮಾಣವಾದ ಹಾಗೆ, ಒದಗಿಸಲಾಗಿದೆ.

ಇ) ಮಂಜೂರಾದ ಎಲ್ಲಾ ಸಿಬ್ಬಂದಿಯನ್ನು ಬೇರೆ ಬೇರೆ ಇಲಾಖೆಯವರು ಅಂದರೆ, ಆರೋಗ್ಯ ಇಲಾಖೆ, ಪಿಡಬ್ಲ್ಯೂಡಿ. ಎಸ್ ಎ.ಡಿ. ಮತ್ತು ಡಿಪಿಎಆರ್ ಮುಂತಾದವರಿಂದ ತುಂಬಬೇಕಾಗಿತ್ತು. ಕೆಲವೊಂದು ಕಾರಣಗಳಿಂದ ತುಂಬಲಾಗಿಲ್ಲ ಮತ್ತು ಇದನ್ನು ಪರಿಹರಿಸಲಿಕ್ಕೆಂದು, ಎಲ್ಲಾ ತಾಂತ್ರಿಕ ಹುದ್ದೆಗಳನ್ನು ತುಂಬಲಿಕ್ಕೆ ಈಗಾಗಲೇ ಪ್ರತ್ಯೇಕವಾದ ಇಲಾಖಾ ನೌಕರಿ ಭರ್ತಿಮಾಡಲು ಸಮಿತಿ (ಡಿಆರ್‌ಸಿ)ಯನ್ನು ರಚಿಸಲಾಗಿದೆ. ಮತ್ತು ಎಲ್ಲಾ ಅವಶ್ಯಕವಾದ ಹುದ್ದೆಗಳನ್ನು ಬೇಗನೇ ತುಂಬಲಾಗುವುದು.

ಈ) ರೂ. ೨೮೭೯.೪೨ ಲಕ್ಷಗಳು.

ಅಸಮರ್ಪಕ ಧಾನ್ಯ ವಿತರಣೆಯ ಬಗ್ಗೆ

೨೨೪೦. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಹಿಷವಾಡಗಿ ಗ್ರಾಮ ಸೇವಾ ಸಹಕಾರ ಸಂಘಕ್ಕೆ (ಆಥ್ಗೆ) ಎಷ್ಟು ವರ್ಷದಿಂದ ಧಾನ್ಯ ವಿತರಣೆ ಮಾಡುವ ಪರವಾನಗಿ ಸರ್ಕಾರದಿಂದ ಕೊಡಲಾಗಿತ್ತು ಹಾಗೂ ಈಗ ಅದನ್ನು ಬದಲಾವಣೆ ಮಾಡಲಿಕ್ಕೆ ಕಾರಣವೇನು ?

ಆ) ಮಹಾವೀರ್ ಕೊ-ಆಪರೇಟಿವ್ ಡೈರಿ ಸೊಸೈಟಿ ದಿವಾಳಿಯಾದದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಇ) ರಾಜಕೀಯವಾಗಿ ಮಹಾವೀರ್ ಕೊ-ಆಪರೇಟಿವ್ ಸೊಸೈಟಿಗೆ ಧಾನ್ಯ ವಿತರಣೆ ಮಾಡುವ ಪರವಾನಗಿ ನೀಡಿದ್ದನ್ನು ರದ್ದುಪಡಿಸಿದ್ದಕ್ಕೆ ಸರ್ಕಾರವು ನೀಡುವ ಕಾರಣಗಳೇನು ?